# ಕಾಫಿ ಕಟ್ಟೆ

ಕಾಫಿಲೋಟದ ಸುತ್ತ ಹೆಣೆದ ಗೆಳೆತನ,
ಮತ್ತೆ ಅಲ್ಲಿಗೇ ತಂದಿಳಿಸಿದೆ ನಮ್ಮನ್ನು,
ಅದೆಷ್ಟೋ ದಿನಗಳ ಬಳಿಕ...

ಪ್ರತಿ ಸಂಜೆಗೆ ಕಾಯುತ್ತಿದ್ದ ತುಡಿತ,
ಹಾಡು ಹರಟೆ, ಹುಸಿ ಕೋಪ...
ಕಾಫಿಯ ಬಿಸಿಗೆ ಸುಟ್ಟ ನಾಲಿಗೆಗೆ
ಅಣಕಿಸುತ್ತಿದ್ದೆ ನೀನು
ನಿನಗೆ ಒಂದು ಕಾಫಿಯನ್ನೂ ಸರಿಯಾಗಿ
ಕುಡಿಯಲು ಬರದೆಂದು.

ಅಕಾರಣ ಭಯಕ್ಕೆ ಕೈಹಿಡಿದ
ನಿನ್ನ ಅಭಯ ಸಾಕಿತ್ತು ನನಗೆ
ಸುಮ್ಮನೆ ಕಾಲೆಳೆದು ಸತಾಯಿಸುವ ಮಜ
ಪರಿವೆಯಿಲ್ಲದೆ ಕತ್ತಲಲ್ಲಿ ಜಾರಿ
ಮಿಳಿಯುತ್ತಿದ್ದ ಸಮಯ
ಇವೆಲ್ಲವನ್ನೂ ಎಷ್ಟು ಬಾರಿ ನೆನೆದೆ ನಾನು...

ಅದೇ ಕಾಫಿಯ ಮಧ್ಯೆ ಶುರುವಾದ ಜಗಳ
ನಮ್ಮನ್ನು ಇಷ್ಟು ದೂರಮಾಡಬಲ್ಲದೆಂದು
ಎಣಿಸಿದ್ದೆವೇ ನಾವು...

ಬೊಗಸೆಯಲ್ಲಿ ಹಿಡಿದ ಕಾಫಿ ಪರಿಮಳ
ನಿನ್ನನ್ನು ನೆನಪಿಸಿದಾಗಲೆಲ್ಲ
ಅದಕ್ಕೆ ಶಪಿಸಿದ್ದೇನೆ
ಮತ್ತೆ ಆ ಸಂಜೆ ಬರುವುದೇ ಎಂದು ಅದೇ
ಕಾಫಿಗೆ ಕೇಳಿದ್ದೇನೆ

ಈಗ ಮತ್ತೆ ಬಂದು ಕುಳಿತಿದ್ದೇವೆ ಎದುರು
ಬದಿರು ಈ ಹುಚ್ಚುಮೌನವನ್ನು
ಮಾತನಾಡಿಸಬೇಕಿದೆ...

● **ಸಾಧನಾ ಹೆಗಡೆ**



# ಕಾಫಿ ಅಂದರೇನು...

ಮಂಕೆ...
ಅದು ಬರೀ ಕಾಫಿಯಷ್ಟೇ ಅಲ್ಲವೆ
ಗುಟುಕು ಗಂಟಲಿಗಿಳಿಯುತ್ತಲೇ
ಎದೆಯೊಳಗೆ ಹೆಪ್ಪುಗಟ್ಟಿದ ಮಾತುಗಳ
ಕದಡುವ–ಹೊರಚಿಮ್ಮಿಸುವ ಜೀವರಸ

ಅಡಿ ನೋಡು
ಹಬೆಯಾಡುವ ಕಾಫಿಜೊತೆ ನಾಕು ಮಾತು
ಅಣ್ಣತಮ್ಮನೊ, ಅವ್ವಅಪ್ಪನೊ
ಗೆಳೆಯನೊ–ಗೆಳತಿಯೊ–ಮನೆಗೆಲಸದವಳೊ
ಯಾರಾದರೇನು ಆ ಕ್ಷಣ ಅವರು ನಿನ್ನವರೇ

ಅಕ್ಕನ ಬೇಗೆಗಳಿಗೆ ಕಿವಿಯಾದುದು
ಇನಿಯನ ಬಯಕೆಗಳಿಗೆ ಪುಳಕಗೊಂಡಿದ್ದು
ಕೆಲಸದವಳ ಕಣ್ಣೀರಿಗೆ ಕರಗಿ ಹೋದುದು
ಸಹೋದ್ಯೋಗಿಯ 'ಆ' ಸಂಬಂಧ ಕೇಳಿ
ಬೆಚ್ಚಿಬಿದ್ದುದು
ಇದೇ ಕಾಫಿ ಎನ್ನುವ ನೆಪದಲ್ಲಲ್ಲವೇ?

ತವರಿಂದ ಬಂದ ಅಮ್ಮನೊಂದಿಗೆ
ಗುಟುಗುಟುಕೇ ಸುರುಗುಟ್ಟುತ್ತ
ಗುಟ್ಟನ್ನೆಲ್ಲ ಕಾರಿಕೊಂಡಿದ್ದು
ಕಪ್ಪಲ್ಲೇ ಎದೆಯಾಳದ ಪ್ರೀತಿ ಸುರಿದು
ಅಪ್ಪನ ಕೈಗಿಡುತ್ತ ಖುಷಿ ಪಟ್ಟಿದ್ದು
ಕಾಫಿಯೇ ಕಾರಣವಲ್ಲವೇ ಇದಕ್ಕೆಲ್ಲ...

● **ಸುವರ್ಣಾ ಸಿ. ಮಠ**